


# ಫುಡ್ ಮ್ಯೂಸಿಯಂ!

ನೀವು ಇಲ್ಲಿ ಒಳ ಹೊಕ್ಕರೆ ಸಾಕು ಹೊಟ್ಟೆಯಲ್ಲಾ ತೊಳಸಿ ವಾಕರಿಕೆ ಬರುವುದು ಶತಸಿದ್ಧ! ಅರೆರೆ ಇದ್ಯಾವ ಜಾಗ ಎಂದು ನೀವು ಅಂದು ಕೊಳ್ಳುತ್ತೀರಲ್ಲವೇ? ಹೌದು, ಸ್ವೀಡನ್ನಿನ ಮಾಲ್ಮೊ ನಗರದಲ್ಲಿ ಹೋದವರಿಗೆಲ್ಲಾ ಜಿಗುಪ್ಸೆ ತರಿಸುವಂಥ ಹೊಸ 'ಫುಡ್ ಮ್ಯೂಸಿಯಂ' ಇತ್ತೀಚೆಗೆ ಪ್ರಾರಂಭವಾಗಿದೆ.

ಕೆಲವು ದೇಶದ ಜನಾಂಗದವರು ಸೇವನೆ ಮಾಡುತ್ತಾರೆ ಎನ್ನಲಾಗುವ ಭಕ್ಷ್ಯಗಳು ಈ ವಿಚಿತ್ರ ಮ್ಯೂಸಿಯಂನಲ್ಲಿವೆ. ಹುಳಿ ಬಂದಿರುವ ತಿಮಿಂಗಿಲದ ಮಾಂಸ, ಎತ್ತಿನ ವೃಷಣ, ಇರುವೆಗಳ ಲಾರ್ವಾ, ಹುಳು ಬಂದಿರುವ ಚೀಸ್ ಮುಂತಾದವುಗಳನ್ನು ನೋಡುವಾಗ ಜನರು ವಾಂತಿ ಮಾಡಿಕೊಳ್ಳುತ್ತಾರೆಂದು ಮ್ಯೂಸಿಯಂನವರು ಪ್ರವೇಶ ದ್ವಾರದಲ್ಲಿ ವಾಂತಿ ಚೀಲವನ್ನು ನೀಡುತ್ತಾರೆ! ಯಾವುದು ನಿಮಗೆ ಅಸಹ್ಯ ವೆನಿಸುತ್ತದೆ ಎಂದು ಜನರಿಗೆ ನಾನು ಕೇಳಬೇಕು ಮತ್ತು ಜಿಗುಪ್ಸೆಯು ಯಾವಾಗಲೂ ನೋಡುವವರ ವರ್ತನೆಯಲ್ಲಿರುತ್ತದೆ ಎನ್ನುವುದು ಗೊತ್ತಾಗಲಿ ಎಂದು ಹೇಳಿರುವ ಸಾಮ್ಯುಯಲ್ ವೆಸ್ಟ್ ಎಂಬಾತ ಈ ಮ್ಯೂಸಿಯಂನ ಸಂಸ್ಥಾಪಕ. ಏಷ್ಯಾ, ಯೂರೋಪ್, ಆಸ್ಟ್ರೇಲಿಯಾ ಮುಂತಾದ ಕಡೆಗಳಿಂದ ಬಂದಿರುವ ಸುಮಾರು 80 ಬಗೆಯ ಆಹಾರ ಪದಾರ್ಥಗಳ ಪ್ರದರ್ಶನವನ್ನು ಇಲ್ಲಿ ನೋಡಬಹುದು. ಕೋಳಿ ಅಥವಾ ಬಾತುಕೋಳಿಯ ಮೊಟ್ಟೆಗಳನ್ನು ಹಲವಾರು ತಿಂಗಳುಗಳ ಕಾಲ ಇಟ್ಟು ಕೊಳೆಸಿ ಹುಳಿಬರಿಸಿದ ಸೆಂಚುರಿ ಎಗ್ ಎನ್ನುವ ಚೀನಾ ಖಾದ್ಯ,ಜೀವಂತ ಹುಳುಗಳಿರುವ ಕಾಸು ಮಜರ್ು ಎನ್ನುವ ಸರ್ಡೆನಿಯನ್ ಕುರಿ ಹಾಲಿನ ಚೀಸ್, ಕೆಂಪು ಖಾರ ಹಾಕಿರುವ ದನದ ಮಾಂಸದ ಸಾರು ಮುಂತಾದವುಗಳು ರೆಸಿಪಿಯೊಂದಿಗೆ ನೋಡಲು ಲಭ್ಯ. ಇಲ್ಲಿರುವ ಕೆಲವು ಖಾದ್ಯಗಳನ್ನು ತಯಾರಿಸುವಾಗ ಪ್ರಾಣಿಗಳಿಗೆ ನೀಡಿರುವ ಹಿಂಸೆಯನ್ನು ನೆನೆಸಿಕೊಂಡರೆ ಎಂಥವರಿಗೂ ಮನಸ್ಸಿಗೆ ಮುಜುಗರವನ್ನುಂಟು ಮಾಡುತ್ತದೆ.

■ ವಿದ್ಯಾ ವಿ. ಹಾಲಭಾವಿ

